UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Saturday
20-06-2026

ಪ. ಬಂಗಾಳದ ಹೂಗ್ಲಿ ಜಿಲ್ಲೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಧಾನಿ ಚಾಲನೆ

ಇಂದು ಪಿಎಂ ಕಿಸಾನ್ 23ನೇ ಕಂತಿನ ಹಣ

ದೆಹಲಿ: ಕೇಂದ್ರ ಸರಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ ಕಿಸಾನ್) ಯೋಜನೆಯ 23ನೇ ಕಂತಿನ ಹಣ ಇಂದು ಬಿಡುಗಡೆಯಾಗಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ದೇಶಾದ್ಯಂತ ಇರುವ ಕೋಟ್ಯಂತರ ಫಲಾನುಭವಿ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣವನ್ನು ವರ್ಗಾವಣೆ ಮಾಡಲಿದ್ದಾರೆ. ರೈತರ ಆರ್ಥಿಕ ಸಬಲೀಕರಣಕ್ಕಾಗಿ ಜಾರಿಗೆ ತಂದಿರುವ ಈ ಯೋಜನೆಯಡಿ ಪ್ರತಿ ಕಂತಿನಲ್ಲೂ 2,000 ರು. ನೀಡಲಾಗುತ್ತಿದ್ದು, ದೇಶದ ಅನ್ನದಾತರ ಖಾತೆಗಳಿಗೆ ಜಮೆಯಾಗಲಿದೆ.

ಕಿಸಾನ್ ಸಮ್ಮಾನ್ ನಿಧಿ ಯೋಜನೆ: ಪ್ರಧಾನ ನರೇಂದ್ರ ಮೋದಿ ಅವರು ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಗೆ ಇಂದು ಭೇಟಿ ನೀಡುತ್ತಿದ್ದು, ಸಂಜೆ ನಡೆಯುವ ಆ ಕಾರ್ಯಕ್ರಮದ ವೇದಿಕೆಯಿಂದ ಕಿಸಾನ್ ಯೋಜನೆಯ ಹಣವನ್ನು ಡಿಜಿಟಲ್ ಪ್ಲಾಟ್‌ಫಾರ್ಮ್ ಮೂಲಕ ಬಿಡುಗಡೆ ಮಾಡಲಿದ್ದಾರೆ. ಈ ಬಗ್ಗೆ ಮಾಹಿತಿ ನೀಡಿರುವ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ದೇಶಾದ್ಯಂತ ಒಟ್ಟು 9.44 ಕೋಟಿ ಫಲಾನುಭವಿ ರೈತರ ಬ್ಯಾಂಕ್ ಖಾತೆಗಳಿಗೆ 18,880 ಕೋಟಿ ರು. ಹಣ ಜಮೆಯಾಗಲಿದೆ. ವಿಶೇಷವಾಗಿ ಪಶ್ಚಿಮ ಬಂಗಾಳ ವೊಂದರಲ್ಲಿಯೇ 45.35 ಲಕ್ಷಕ್ಕೂ ಹೆಚ್ಚು ರೈತ ಫಲಾನುಭವಿಗಳ ಖಾತೆಗಳಿಗೆ 907 ಕೋಟಿ ರು.ನೇರ ನಗದು ವರ್ಗಾವಣೆ ಮೂಲಕ ತಲುಪಲಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರಕಾರವು ರೈತರಿಗೆ ಆರ್ಥಿಕ ನೆರವು ನೀಡುವ ಉದ್ದೇಶದಿಂದ ಪಿಎಂ ಕಿಸಾನ್ ಯೋಜನೆಯನ್ನು ಜಾರಿಗೆ ತಂದಿದ್ದು, ವರ್ಷಕ್ಕೆ ಒಟ್ಟು 6,000 ರು. ನೀಡಲಾಗುತ್ತದೆ. ಈ ಮೊತ್ತವನ್ನು ಪ್ರತೀ ನಾಲ್ಕು ತಿಂಗಳಿಗೊಮ್ಮೆ ಮೂರು ಕಂತುಗಳಲ್ಲಿ ತಲಾ 2,000 ರು.ನಂತೆ ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗುತ್ತದೆ. ಮುಂಗಾರು ಹಂಗಾಮಿನ ಈ ಸಂದರ್ಭದಲ್ಲಿ ರಸಗೊಬ್ಬರ, ಬಿತ್ತನೆ ಬೀಜ ಹಾಗೂ ಕೃಷಿ ಪರಿಕರಗಳ ಖರೀದಿಗೆ ಈ ಹಣ ರೈತರಿಗೆ ಬಹಳಷ್ಟು ನೆರವಾಗಲಿದೆ.

ರೈತರ ಖಾತೆ ಸೇರಿವೆ 22 ಕಂತುಗಳು: ಅರ್ಹ ರೈತರಿಗೆ ಈ ಬಾರಿ ಯೋಜನೆಯ 23ನೇ ಕಂತಿನ ಹಣವನ್ನು ವಿತರಿಸಲಾಗುತ್ತಿದೆ. ಇದಕ್ಕೂ ಮುನ್ನ ರೈತರ ಖಾತೆಗಳಿಗೆ ಯಶಸ್ವಿಯಾಗಿ ಒಟ್ಟು 22 ಕಂತುಗಳನ್ನು ಜಮಾ ಮಾಡಲಾಗಿದೆ. ಕಳೆದ ಮಾರ್ಚ್ 13ರಂದು ಆಸ್ಸಾಂ ಗುವಾಹಟಿಯಿಂದ 22ನೇ ಕಂತಿನ ಹಣವನ್ನು ಬಿಡುಗಡೆ ಮಾಡಲಾಗಿತ್ತು.



ಕೆವೈಸಿ ಕಡ್ಡಾಯ

ರೈತರು ತಮ್ಮ ಇ-ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದರೆ ಮಾತ್ರ ಬ್ಯಾಂಕ್ ಖಾತೆಗೆ ಪಿಎಂ ಕಿಸಾನ್ ಯೋಜನೆಯ ಹಣ ಬರುತ್ತದೆ. ಖಾತೆಗೆ ಆಧಾರ್ ಕಾರ್ಡ್ ಲಿಂಕ್ ಕಡ್ಡಾಯವಾಗಿದೆ, ಅಲ್ಲದೆ ಸರಕಾರದ ಅಗ್ರಿಸ್ಟಾಕ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ.

ರಾಜ್ಯದ ರೈತರಿಗೆ 1,100 ಕೋಟಿ

ಪಿಎಂ ಕಿಸಾನ್ ಯೋಜನೆಯಡಿ ಕರ್ನಾಟಕ ರಾಜ್ಯದ ಒಟ್ಟು 41,54,160 ಫಲಾನುಭವಿ ರೈತರಿಗೆ ಕೇಂದ್ರ ಸರಕಾರದಿಂದ ಒಟ್ಟಾರೆ ರು. 1,100 ಕೋಟಿ ಆರ್ಥಿಕ ನೆರವು ನೇರ ನಗದು ವರ್ಗಾವಣೆ ಮೂಲಕ ಜಮೆಯಾಗಿದೆ ಎಂದು ತಿಳಿದು ಬಂದಿದೆ. 2019, ಫೆಬ್ರವರಿಯಿಂದ ಈ ಯೋಜನೆ ಜಾರಿಯಲ್ಲಿದ್ದು, ಸಾಗುವಳಿ ಭೂಮಿ ಹೊಂದಿರುವ ಅರ್ಹ ರೈತ ಕುಟುಂಬಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

Viswavani pg 08

ರಾಸಾಯನಿಕ ಗೊಬ್ಬರಕ್ಕೆ ಪರ್ಯಾಯವಾಗಿ ಸಾವಯವ ಕೃಷಿಯತ್ತ ರೈತರ ಒಲವು

ಕೊಟ್ಟಿಗೆ ಗೊಬ್ಬರಕ್ಕೆ ಎಲ್ಲಿಡೆ ಭಾರೀ ಬೇಡಿಕೆ

ವಿ. ನರಸಿಂಹಮೂರ್ತಿ, ದೇವನಹಳ್ಳಿ

ದೇವನಹಳ್ಳಿ: ಮುಂಗಾರು ಮಳೆ ಆರಂಭವಾಗು ತ್ತಿದ್ದಂತೆ ರೈತರು ಬಿತ್ತನೆ ಕಾರ್ಯಕ್ಕೆ ಸಜ್ಜಾಗಿದ್ದಾರೆ. ಇದೇ ವೇಳೆ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಿ, ಸಾವಯವ ಕೃಷಿಯತ್ತ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ. ಪರಿಣಾಮವಾಗಿ ಕೊಟ್ಟಿಗೆ ಗೊಬ್ಬರಕ್ಕೆ ಭಾರೀ ಬೇಡಿಕೆ ಉಂಟಾಗಿದ್ದು, ಅದರ ಬೆಲೆಯೂ ಗಣನೀಯವಾಗಿ ಏರಿಕೆಯಾಗಿದೆ.

ಹಿಂದೆ ಒಂದು ಟ್ರ್ಯಾಕ್ಟರ್ (ಎರಡು ಟಿಲ್ಲರ್) ಕೊಟ್ಟಿಗೆ ಗೊಬ್ಬರದ ಬೆಲೆ ? 6 ಸಾವಿರದಷ್ಟಿದ್ದರೆ, ಈಗ ? 7 ಸಾವಿರದವರೆಗೆ ಏರಿಕೆಯಾಗಿದೆ. ಭೂಮಿಯಲ್ಲಿ ಕೊಟ್ಟಿಗೆಗೊಬ್ಬರ ಬಳಸುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುವುದರ ಜೊತೆಗೆ ತೇವಾಂಶ ಹೆಚ್ಚು ಕಾಲ ಉಳಿಯುವುದರಿಂದ ರೈತರು ಸಾವಯವ ಗೊಬ್ಬರದತ್ತ ಹೆಚ್ಚು ಒಲವು ತೋರುತ್ತಿದ್ದಾರೆ.

ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಜಾನುವಾರುಗಳ ಸಂಖ್ಯೆ ಕಡಿಮೆಯಾಗಿರುವ ಕಾರಣ ಕೊಟ್ಟಿಗೆ ಗೊಬ್ಬರದ ಲಭ್ಯತೆ ಗಣನೀಯ ವಾಗಿ ಇಳಿದಿದೆ.

ಹಿಂದೆ ಪ್ರತಿಯೊಂದು ರೈತರ ಮನೆಯಲ್ಲೂ ಹಸು, ಎಮ್ಮೆ ಹಾಗೂ ಕುರಿಗಳಿದ್ದ ಕಾರಣ ಗೊಬ್ಬರ ಸುಲಭವಾಗಿ ದೊರೆಯು ತ್ತಿತ್ತು. ಈಗ ಹೈನುಗಾರಿಕೆ ಕುಂಠಿತವಾಗಿರುವ ಹಿನ್ನೆಲೆಯಲ್ಲಿ ಸ್ಥಳೀಯವಾಗಿ ಗೊಬ್ಬರ ಸಿಗುವುದು ಕಷ್ಟವಾಗಿದೆ ಎಂದು ರೈತರು ಹೇಳುತ್ತಾರೆ.

ಆಂಧ್ರ ಪ್ರದೇಶದಿಂದ ಗೊಬ್ಬರ ಪೂರೈಕೆ: ಸ್ಥಳೀಯವಾಗಿ ಗೊಬ್ಬರ ಕೊರತೆಯಾಗಿರುವ ಕಾರಣ ದೇವನಹಳ್ಳಿ ಭಾಗದ ರೈತರು ಆಂಧ್ರ ಪ್ರದೇಶದಿಂದ ಲಾರಿಗಳ ಮೂಲಕ ಕೊಟ್ಟಿಗೆ ಗೊಬ್ಬರ ತರಿಸಿಕೊಳ್ಳುತ್ತಿದ್ದಾರೆ.

ಮೂರು ಟ್ರ್ಯಾಕ್ಟರ್ ಲೋಡ್ ಗೊಬ್ಬರ ಹೊಂದಿರುವ ಒಂದು ಲಾರಿಯ ಬೆಲೆ ಸುಮಾರು 22 ಸಾವಿರವಾಗಿರುವುದರಿಂದ ಹಲವು ರೈತರು ಸೇರಿ ಗೊಬ್ಬರ ಖರೀದಿಸುತ್ತಿದ್ದಾರೆ.

ಕೋಳಿ ಗೊಬ್ಬರಕ್ಕೂ ಹೆಚ್ಚಿದ ಬೇಡಿಕೆ: ಕೊಟ್ಟಿಗೆ ಗೊಬ್ಬರ ಸಿಗದ ಹಿನ್ನೆಲೆಯಲ್ಲಿ ರೈತರು ಈಗ ಕೋಳಿ ಫಾರಂಗಳಿಂದ ಕೋಳಿ ಗೊಬ್ಬರವನ್ನೂ ಖರೀದಿಸಿ ಹೊಲಗಳಿಗೆ ಬಳಸುತ್ತಿದ್ದಾರೆ. ಇದರಿಂದ ಕೋಳಿ ಫಾರಂ ಮಾಲೀಕರಿಗೂ ಹೆಚ್ಚುವರಿ ಆದಾಯ ದೊರೆಯು ತ್ತಿದ್ದು, ಕೋಳಿ ಗೊಬ್ಬರದ ಬೇಡಿಕೆಯೂ ಹೆಚ್ಚಿದೆ.

ಕೃಷಿ ಇಲಾಖೆಯ ಅಧಿಕಾರಿಗಳ ಪ್ರಕಾರ, ಕೋಳಿ ಗೊಬ್ಬರವನ್ನು ನೇರವಾಗಿ ಹೊಲಕ್ಕೆ ಹಾಕುವ ಬದಲು ಕೆಲವು ದಿನ ನೆರಳಿನಲ್ಲಿ ಸಂಗ್ರಹಿಸಿ ನಂತರ ಬಳಸಿದರೆ ಅದರಲ್ಲಿರುವ ಜೀವಾಣುಗಳ ಕ್ರಿಯಾಶೀಲತೆ ಹೆಚ್ಚಿ, ಮಣ್ಣಿನ ಗುಣಮಟ್ಟ ಸುಧಾರಿಸುತ್ತದೆ.

ಕೋಳಿ ಗೊಬ್ಬರದಲ್ಲಿ ಸಾರಜನಕ, ರಂಜಕ, ಪೊಟ್ಯಾಷ್ ಸೇರಿದಂತೆ ಹಲವು ಸೂಕ್ಷ್ಮ ಪೋಷಕಾಂಶಗಳು ಸಮೃದ್ಧವಾಗಿದ್ದು, ಬೆಳೆಗಳ ಉತ್ತಮ ಬೆಳವಣಿಗೆಗೆ ನೆರವಾಗುತ್ತವೆ.

ದಿಗಂತ ವಿಶೇಷ



> ರಾಸಾಯನಿಕ ಗೊಬ್ಬರಗಳ ಬೆಲೆ ನಿರಂತರವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ನಾವು ಕೊಟ್ಟಿಗೆ ಗೊಬ್ಬರ ಬಳಕೆಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇವೆ. ಇದರಿಂದ ಮಣ್ಣಿನ ಫಲವತ್ತತೆಯೂ ಉತ್ತಮವಾಗುತ್ತದೆ.
> ■ ಬಸವರಾಜು, ರೈತ, ಹಾರೋಹಳ್ಳಿ

- ಕೊಟ್ಟಿಗೆ ಗೊಬ್ಬರದಿಂದ ಮಣ್ಣಿನ ಫಲವತ್ತತೆ ಹೆಚ್ಚಳ
- ಮಣ್ಣಿನಲ್ಲಿ ತೇವಾಂಶವನ್ನು ಹೆಚ್ಚು ಕಾಲ ಉಳಿಸಿಕೊಳ್ಳಲು ಸಹಕಾರಿ
- ಬೆಳೆಗಳ ಬೇರುಗಳ ಬೆಳವಣಿಗೆ ಉತ್ತಮ
- ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆ ಕಡಿಮೆ
- ದೀರ್ಘಾವಧಿಯಲ್ಲಿ ಮಣ್ಣಿನ ಆರೋಗ್ಯ ಕಾಪಾಡಿ ಉತ್ತಮ ಇಳುವರಿಗೆ ಸಹಕಾರಿ.

ಸಾವಯವ ಕೃಷಿಗೆ ಉತ್ತೇಜನ

ಸಾವಯವ ಕೃಷಿ ಎನ್ನುವುದು ಕೇವಲ ಒಂದು ಬೇಸಾಯ ಪದ್ಧತಿಯಲ್ಲ, ಅದು ಭೂಮಿ, ಪರಿಸರ ಮತ್ತು ಮನುಷ್ಯನ ಆರೋಗ್ಯವನ್ನು ರಕ್ಷಿಸುವ ಒಂದು ಸುಸ್ಥಿರ ಜೀವನವಿಧಾನ. ಇಂದಿನ ದಿನಗಳಲ್ಲಿ ರಾಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳ ಅತಿಯಾದ ಬಳಕೆಯಿಂದಾಗಿ ಮಣ್ಣಿನ ಫಲವತ್ತತೆ ಕ್ಷೀಣಿಸುತ್ತಿದೆ ಹಾಗೂ ಆಹಾರ ಪದಾರ್ಥಗಳು ವಿಷಪೂರಿತವಾಗುತ್ತಿವೆ. ಈ ಹಿನ್ನೆಲೆಯಲ್ಲಿ ಸಾವಯವ ಕೃಷಿಗೆ ಉತ್ತೇಜನ ನೀಡುವುದು ಅತ್ಯಂತ ತುರ್ತು ಮತ್ತು ಅಗತ್ಯವಾಗಿದೆ.

Hosadiganta pg 10

ಕೃಷಿ ಭೂಮಿಗೆ ನೀಡುವ ಪರಿಹಾರ ವೈಜ್ಞಾನಿಕ

ಬೆಂಗಳೂರು: ಸಾರ್ವಜನಿಕ ಉದ್ದೇಶಗಳಿಗಾಗಿ ಸ್ವಾಧೀನಪಡಿಸಿಕೊಳ್ಳುವ ಕೃಷಿ ಭೂಮಿಗೆ ನೀಡುವ ಪರಿಹಾರ ಮೊತ್ತವು ವೈಜ್ಞಾನಿಕ ಹಾಗೂ ನ್ಯಾಯಸಮ್ಮತವಾಗಿರಬೇಕು ಎಂದು ವಕೀಲ ವಿಷ್ಣು ಹೆಗಡೆ ಅಭಿಪ್ರಾಯಪಟ್ಟರು.

ನಗರದ ಗಾಂಧಿ ಭವನದಲ್ಲಿ ಭಾರತೀಯ ಕಿಸಾನ್ ಸಂಘ-ಕರ್ನಾಟಕ ಪ್ರದೇಶ, ಕರ್ನಾಟಕ ದಕ್ಷಿಣ ಪ್ರಾಂತ ವತಿಯಿಂದ ಆಯೋಜಿಸಲಾಗಿದ್ದ ಕೃಷಿ ಭೂಮಿಯ ಸ್ವಾಧೀನ - ರೈತರ ಅಸ್ತಿತ್ವಕ್ಕೆ ಪೂರಕವೇ, ಮಾರಕವೇ? ಎಂಬ ವಿಷಯದ ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಭೂಮಿಯ ನೈಜ ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ಪರಿಹಾರ ನಿಗದಿಯಾಗಬೇಕು. ಆದರೆ ಪ್ರಸ್ತುತ ಉಪನೋಂದಣಾಧಿಕಾರಿ ಕಚೇರಿಯ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ ಪರಿಹಾರ ನೀಡಲಾಗುತ್ತಿದ್ದು, ಇದರಿಂದ ರೈತರಿಗೆ ಸಮರ್ಪಕ ನ್ಯಾಯ ದೊರೆಯುತ್ತಿಲ್ಲ ಎಂದು ಹೇಳಿದರು. ರಸ್ತೆ, ರೈಲು, ಕೈಗಾರಿಕಾ ಕಾರಿಡಾರ್ ಹಾಗೂ ಇತರೆ ಮೂಲಸೌಕರ್ಯ ಯೋಜನೆಗಳಿಗಾಗಿ ಸರ್ಕಾರ ಭೂಸ್ವಾಧೀನ ಮಾಡುತ್ತಿರುವುದು ಅಭಿವೃದ್ಧಿಯ ಭಾಗವಾಗಿದ್ದರೂ, ರೈತರ ಜೀವನೋಪಾಯ ಮತ್ತು ಭವಿಷ್ಯದ ಭದ್ರತೆಗೂ ಸಮಾನ ಆದ್ಯತೆ ನೀಡಬೇಕಿದೆ.

2013ರ ಭೂಸ್ವಾಧೀನ, ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಹಾಗೂ ಪುನರ್ವಸತಿ ಕಾಯ್ದೆ ಪ್ರಕಾರ ಭೂಮಿ ಕಳೆದುಕೊಳ್ಳುವವರಿಗೆ ಸಮರ್ಪಕ ಪರಿಹಾರದ ಜತೆಗೆ ಪುನರ್ವಸತಿ ಮತ್ತು ಪುನರ್ ಸ್ಥಾಪನೆ ಸೌಲಭ್ಯಗಳನ್ನು ಕಲ್ಪಿಸಬೇಕಿದೆ. ಆದರೆ ಹಲವು ಸಂದರ್ಭಗಳಲ್ಲಿ ಈ ನಿಬಂಧನೆಗಳು ಪರಿಣಾಮಕಾರಿಯಾಗಿ ಜಾರಿಯಾಗುತ್ತಿಲ್ಲ ಎಂದು ವಿಷ್ಣು ಹೆಗಡೆ ಆಸಮಾಧಾನ ವ್ಯಕ್ತಪಡಿಸಿದರು.

ಒಂದು ಅಥವಾ ಎರಡು ಎಕರೆ ಭೂಮಿಯೇ ಜೀವನಾಧಾರವಾಗಿರುವ ರೈತನು ಅದನ್ನು ಕಳೆದುಕೊಂಡ ನಂತರ ಎಲ್ಲಿಗೆ ಹೋಗಬೇಕು? ಪಡೆದ ಪರಿಹಾರದ ಹಣ ಮುಗಿದ ಬಳಿಕ ಆತ ಹಾಗೂ ಆತನ ಕುಟುಂಬದ ಭವಿಷ್ಯ ಏನು? ಎಂಬ ಪ್ರಶ್ನೆಯನ್ನು ಅವರು ಮುಂದಿಟ್ಟರು.

Hosadiganta pg 10

976 ಕೃಷಿ ಅಧಿಕಾರಿ ಹುದ್ದೆಗೆ ಅರ್ಜಿ ಹಾಕಲು ಕಲ್ಯಾಣದ ಹೊಸ ಪದವೀಧರರು ಅನರ್ಹ!

ಕಲಬುರಗಿ: ರಾಜ್ಯದಲ್ಲಿ ಖಾಲಿ ಇರುವ 976 ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆ ನೇಮಕಾತಿಗೆ ಅರ್ಜಿ ಸಲ್ಲಿಸಲು ಇಂದು (ಜೂ.20) ಕೊನೆ ದಿನವಾಗಿದೆ. ಆದರೆ, ಅರ್ಜಿ ಸಲ್ಲಿಸಲು ರಾಯಚೂರು ಕೃಷಿ ವಿವಿ ವ್ಯಾಪ್ತಿಯ ಕಲ್ಯಾಣ ಕರ್ನಾಟಕ ಭಾಗದ ಹೊಸ ಕೃಷಿ ಪದವೀಧರರು ಅನರ್ಹರಾಗಿದ್ದಾರೆ. ರಾಜ್ಯದ ಎಲ್ಲ ಕೃಷಿ ವಿವಿಗಳು ಬಿಎಸ್ಸಿ ಅಂತಿಮ ವರ್ಷದ ಪದವಿಯನ್ನು ಈಗಷ್ಟೇ ನೀಡಿವೆ. ಆದರೆ ರಾಯಚೂರು ಕೃಷಿ ವಿವಿ ಅಂತಿಮ ವರ್ಷದ ಪದವಿಯನ್ನು ಇನ್ನೂ ಎರಡೂವರೆ ವಾರಗಳ ನಂತರ ನೀಡುತ್ತಿರುವುದೇ ಇದಕ್ಕೆ ಕಾರಣ. ವಿದ್ಯಾರ್ಥಿಗಳಿಗೆ ಜುಲೈ 11ರ ನಂತರ ಗ್ರೇಡ್ ನೀಡಲು ಅವಕಾಶವಿದೆ. ಹೀಗಾಗಿ ವಿವಿ ವಿದ್ಯಾರ್ಥಿಗಳಿಗೂ ಅವಕಾಶ ಕಲ್ಪಿಸುವಂತೆ ಕೆಇಎಗೆ ಕೋರುವಂತೆ ಕೃಷಿ ಇಲಾಖೆ ಕಾರ್ಯದರ್ಶಿಗಳಿಗೆ ಪತ್ರ ಬರೆಯಲಾಗಿದೆ ಎಂದು ವಿವಿ ಕುಲಪತಿ ಡಾ।ಎಂ. ಹನುಮಂತಪ್ಪ ತಿಳಿಸಿದ್ದಾರೆ.

Udayavani pg 02